(ಶ್ರೀ ಕೆ. ಪುಟ್ಟಸ್ವಾಮಿ)

ಅಂಥವರಲ್ಲಿ 40 ವರ್ಷಕ್ಕೆ ಮೀರಿದವರೆಲ್ಲಾ ಈ ಪ್ರೊಪೋಷನ್‌ಗೆ ಒಳಪಡುತ್ತಾರೆ. ಆದರೆ ರಾಜ್ಯದಲ್ಲಿ ಎಲ್ಲೆಲ್ಲಿ ಈ 40 ವರ್ಷ ವಯಸ್ಸಿನೊಳಗಿರತಕ್ಕ ಜನ ಇದ್ದಾರೋ ಅವರೆಷ್ಟು ಮಂದಿ ಇದ್ದಾರೆ ಎಂಬ ವಿವರಗಳು ಇಲ್ಲ.

Survey of Bangalore Water Supply Scheme

291. Sri H. PUTTADASA (Sathanur).—

Will the Minister for Home and Municipal Administration be pleased to state.—

(*a*) whether survey in connection with Bangalore Water Supply scheme has been completed;

(*b*) whether the staff quarters and other buildings under the said scheme are being put up;

(*c*) the total amount spent on building constructed and suvery work done so far;

(*d*) whether these works were taken up after providing funds for the scheme;

(*e*) if so, from what source the funds have been provided:

(*f*) if so, from what source funds are proposed to be met;

(*g*) the source of funds from which the Bangalore Water Supply and Sewerage Board has been spending at present;

(*h*) whether it is a fact that negotiations with the World Bank have ended in Fiasco?

(*i*) what is other alternative for finding out funds?

A.—Sri R. M. PATIL (Minister for Home and Municipal Administration).—

(*a*) No; it is in progress.

(*b*) Yes.

(*c*) Rs. 10,72,650 to the end of January 1968.

(*d*) Yes.

(*e*) Loans provided by Government from time to time.

(*f*) Does not arise.

(*g*) Loans provided by Government from time to time.

(*h*) Negotiations with the World Bank have been dropped.

(*i*) Loans granted by Government from time to time.

ಶ್ರೀ ಎಚ್. ಪುಟ್ಟಸ್ವಾಮಿ.—ಇಲ್ಲಿ ತಾವು ನಿರೀಕ್ಷೆ ಮಾಡಿರುವುದಕ್ಕಿಂತ ಮುಂಚೆಯೇ ಮುಗಿಯುತ್ತದೆ ಎಂದು ತಿಳಿಸಿದ್ದೀರಿ, ಇದು ಮುಗಿಯುವುದು ಯಾವಾಗ ?

Sri R. M. PATIL.—It may be completed before the end of June.

ಶ್ರೀ ಎಚ್. ಪುಟ್ಟಸ್ವಾಮಿ.—ವಿಶ್ವಬ್ಯಾಂಕಿನವರು ಕೈಬಿಟ್ಟಮೇಲೆ ನೀವು ಇದಕ್ಕೆ ದುಡ್ಡನ್ನು ಹಾಕಿ ಇನ್ನೆಷ್ಟು ವರ್ಷಗಳಲ್ಲಿ ನೀರನ್ನು ಬೆಂಗಳೂರಿಗೆ ಒದಗಿಸುತ್ತೀರಿ ?

Sri R. M. PATIL.—It is estimated that it can be completed within five years from the date of starting of construction of the project.

ಶ್ರೀ ಟಿ. ಆರ್. ಶಾಮಣ್ಣ.—1970ಕ್ಕೆ ಕಾವೇರಿ ನೀರನ್ನು ಕೊಡುತ್ತೇವೆಂದು ಹೇಳಿದ್ದು ಅದು ಮುಗಿಯಿತು. ತಿಪ್ಪಗೊಂಡನಹಳ್ಳಿಯಲ್ಲಿ ನೀರಿಲ್ಲದೆ ಕಳವಳ ಹೆಚ್ಚಾಗಿದೆ. ಸರ್ಕಾರದವರು ಖಚಿತವಾಗಿ ನೀರನ್ನು ಯಾವಾಗ ಒದಗಿಸುವುದಕ್ಕೆ ಸಾಧ್ಯವಾಗುತ್ತೆ ಎನ್ನುವುದನ್ನು ತಿಳಿಸುತ್ತಾರೆಯೇ?

Sri R. M. PATIL.—I have said number of times that if it is not possible to get funds from the World Bank, Government itself will have to finance funds. Now that Government is financing, the work will not be postponed and it can be started right in earnest. The work can be completed within 5 years from the date of commencement.

ಶ್ರೀ ಎಂ. ಎಸ್. ಕೃಷ್ಣನ್.—ವಿಶ್ವ ಬ್ಯಾಂಕಿನವರು ಸಾಲವನ್ನು ಕೊಡದಿರುವುದಕ್ಕೆ ಕಾರಣಗಳೇನು ? ಅವರೇನು ಷರತ್ತುಗಳನ್ನು ಹಾಕಿದ್ದರು ?

Sri R. M. PATIL.—There were two difficulties which could not be met with. The World Bank stipulated certain conditions (1) 10 per cent of the return on the sale of water. Thereby the cost of the water will be very high and people will not be able to purchase water. The second condition was that every person who takes water should pay half the cost of the water irrespective of the fact whether the Bill will be covered by the rental itself. By this, no water concession or allowance could be given. We have been giving this concession for the last 5 years.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ನೀರಿಗೆ ಹೆಚ್ಚಿನ ದರ ಕೊಡಬೇಕೆಂದು ಹೇಳಿ ನಲ್ಲಿಗಳನ್ನು ಕಟ್ ಮಾಡುತ್ತಿದ್ದೀರಿ, ನೋಟೀಸ್ ಕೊಟ್ಟು ಕಟ್ ಮಾಡುತ್ತಿದ್ದೀರಿ, ಸಾವಿರಾರು ರೂಪಾಯಿ ಬಾಕಿ ಇರುವುದನ್ನು ವಸೂಲು ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೀರಿ, ಆದ್ದರಿಂದ ಮುಖ್ಯ ಮಂತ್ರಿಗಳು ಹೇಳಿದ ಪ್ರಕಾರ ನಲ್ಲಿಗಳನ್ನು ಕಟ್ ಮಾಡುವುದನ್ನು ನಿಲ್ಲಿಸಿ ಬಾಕಿ ವಸೂಲು ಮಾಡುವುದನ್ನು ಹಿಂದಿನ ಟಕ್ಕಾಚಾರ ವ್ಯವಹಾರ ಎಲ್ಲಾ ಸರಿ ಆದಮೇಲೆ, ಒಪ್ಪಿಗೆ ಆದಮೇಲೆ ಈ ಬಾಕಿಯನ್ನು ವಸೂಲು ಮಾಡುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಪ್ರಯತ್ನ ಮಾಡುವ ಪ್ರಶ್ನೆಯೇ ಇಲ್ಲ ; ಇದರ ಬಗ್ಗೆ ಚರ್ಚೆ ಮಾಡಿದ್ದಾರೆ, ಒಪ್ಪಿಕೊಂಡು ಹೋಗಿದ್ದಾರೆ. ಈ ವಿಷಯದಲ್ಲಿ ಒಂದು ನಿರ್ಣಯ ಮಾಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದರೂ ಕೂಡ ಉಪವಾಸ ಮಾಡುತ್ತಿದ್ದಾರೆ. ಅದಕ್ಕೆ ಏನು ಮಾಡಬೇಕು ?

ಶ್ರೀ ಪಾಟಾಳ್ ನಾಗರಾಜ್.—ಒಂದು ತಿಂಗಳ ಕಾಲ ತಾವು ಅವಕಾಶವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೇ, ಈಗ ಅನೇಕ ಕಡೆ ಮೀಟರುಗಳನ್ನು ಕಟ್ ಮಾಡುತ್ತಿದ್ದಾರೆ. ಆದ್ದರಿಂದ ಮೀಟರುಗಳನ್ನು ಕಟ್ ಮಾಡುವುದನ್ನು ಈ ವಿಷಯ ತೀರ್ಮಾನವಾಗುವವರೆಗೆ ನಿಲ್ಲಿಸುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಯಾರು ಪರ್ಸಿಸ್ಟೆಂಟ್ ಡಿಫಾಲ್ಟರು ಇದ್ದಾರೋ ಅವರಿಗೆ ಇಂಥಾ ಕನ್ಸೆಷನ್ ಕೊಡುವುದಕ್ಕಾಗುವುದಿಲ್ಲ.

Mr. DEPUTY SPEAKER.—Question No. 232 lapses as the Member is not here.